ಸ್ವಲ್ಪ ಹೊರಗಿನ ಹವೆ ತಗೋತೀನಿ. ಆಮೇಲೆ ಬೇಕಿದ್ರೆ ನಿಮ್ಮ ಸಹಾಯಕ್ಕೆ ಸೇರಿಕೋತೀನಿ' ಅಂದಿದ್ದ ಹೋಗುವಾಗ. ಒಂದು ತಿಂಗಳಾಗಿತ್ತು. ಮಧ್ಯಾಹ್ನ ಊಟದ ಅನಂತರ ಹಾಸಿನಿಗೆ ವಾಂತಿಯಾಯ್ತು. ಪಿತ್ತವಿರಬೇಕು ಅಂದಳು. ಹಸಿವು ಕ್ರಮೇಣ ಕಮ್ಮಿಯಾಗುತ್ತ ಬಂತು. ಡಾಕ್ಟರು ಜೀರ್ಣಶಕ್ತಿಗೆ ಔಷಧ ಬರೆದುಕೊಟ್ಟರು. ದಿನದಿಂದ ದಿನಕ್ಕೆ ತೂಕ ಕಮ್ಮಿಯಾಗುವುದು ಲಕ್ಷ್ಯಕ್ಕೆ ಬಂದಾಗ ದೇಹದ ವಿಶೇಷ ಪರೀಕ್ಷೆ ಮಾಡಿಸಲು ಹೇಳಿದರು. ಪಟಾಕಿಯ ಸದ್ದು ಅಂದುಕೊಂಡಿದ್ದು ಅಣುಬಾಂಬಾಗಿತ್ತು! ಸುಳಿವು ಕೊಡದೆ ಸದ್ದಿಲ್ಲದೆ ಕೂತು ಲಿವರನ್ನು ಕೊರೆದು ಹಾಕಿತ್ತು. ಕೈಮೀರುವವರೆಗೂ ಅಡಗಿದ್ದು ಈಗ ಅಣಕಿಸುತ್ತ ಅಸಹಾಯಕರನ್ನಾಗಿ ಮಾಡಿತ್ತು. ಇಂತಾ ಸಮಯದಲ್ಲೂ ತನಗೆ ಸಹಾಯ ಮಾಡುವ ಕೆಚ್ಚು ತೋರಿಸುತ್ತಾಳೆ. ಧೈರ್ಯಗುಂದಬಾರದು ಅಂತ ಸಿಕ್ಕಷ್ಟೆ ಅವಕಾಶ ಕೊಟ್ಟು ಆಯಾಸವಾಗದಂತೆ ಅವಳ ಆಸೆ ನೆರವೇರಿಸುತ್ತಿದ್ದ. ಮಾರ್ಕೆಟಿಂಗ್ ವಿಷಯಗಳನ್ನು ಚರ್ಚಿಸುತ್ತಿದ್ದ. ಅವಳು ಸರಿಯಾದ ಸಲಹೆಯನ್ನೆ ಕೊಡುತ್ತಿದ್ದಳು. ಕೀಮೋಥೆರಪಿ ಚಿಕಿತ್ಸೆ ಅವಳನ್ನು ಹಿಂಡಿಹಾಕುತ್ತಿತ್ತು. ಇವತ್ತು ಇದ್ದಕ್ಕಿದ್ದಂತೆ ದೇಹದಾನದ ಕಾಗದಪತ್ರದ ನೆನಪು ಮಾಡಿದಾಗ ಸುಪ್ತವಾಗಿದ್ದ ಮಾಮೂಲಿ ಅನುಭವ ಮರುಕಳಿಸಿದ್ದಷ್ಟೆ ಅಲ್ಲ, ಅವಳ ಅಂತಃಪ್ರಜ್ಞೆಗೆ ಅಂತಹ ಸೂಚನೆಯೇನಾದರೂ ಸಿಗುತ್ತಿದೆಯ ಎಂಬ ಭಯವೂ ಸೇರಿಕೊಂಡು ನರಳಿಸಿಬಿಟ್ಟಿತು. ಇಂದುಸುತನಿಗೆ ಫೋನು ಮಾಡಿ ಸ್ವಲ್ಪದಿನ ರಜೆ ಹಾಕಿ ಬರಲಿಕ್ಕಾಗುತ್ತೇನೋ ವಿಚಾರಿಸಿದ.

ಆವತ್ತು ಪರೀಕ್ಷೆ ಮಾಡಿ ತುಂಬಾಹೊತ್ತು ವಿವರ ನೋಡಿದ ಡಾಕ್ಟರ ಹಣೆಯಮೇಲೆ ನಿರಿಗೆ ಕಾಣಿಸಿತು. ಬಹಳ ಸಮಯವಿದ್ದಹಾಗಿಲ್ಲ, ಅವರು ಖುಷಿಯೆನಿಸಿದ್ದನ್ನು ಮಾಡುತ್ತಿರಲಿ. ತುಂಬಾ ತಡೆಯೋದು ಬೇಡ ಅಂದರು. ರಾತ್ರಿ ಅವಳ ಮಂಚದ ಪಕ್ಕ ಕುಳಿತಿದ್ದ. ಅವಳು ಕಣ್ಣುಮುಚ್ಚಿ ವಿಶ್ರಾಂತಿಯಲ್ಲಿದ್ದಳು. ಅವಳನ್ನು ಮೊದಲ ಬಾರಿ ಕಂಡಾಗಿಂದ ಅವಳು ತನ್ನ ಜೀವನದಲ್ಲಿ ಬಂದು ಇಲ್ಲಿಯವರೆಗೆ ಸಾಗಿದ ಘಟನೆಗಳೆಲ್ಲ ಮೆರವಣಿಗೆಯಲ್ಲಿ ಬಂದವು. ದಾನ ಅಂದರೆ, ಕೊಟ್ಟೆ ಇದಿನ್ನು ನನ್ನದಲ್ಲ ಅಂತ, ಅನ್ನುವ ವಿವರಣೆ ಅವಳೆ ಕೊಟ್ಟಿದ್ದು. ಇವಳು ದೇಹಬಿಟ್ಟು ಎಲ್ಲೋ ಹೋಗಿಬಿಡುತ್ತಾಳೆ, ಅನಂತರ ಅದು ಅವಳದಲ್ಲ. ವಿದ್ಯಾರ್ಥಿಗಳು ಕೊಯ್ದು ನೋಡುತ್ತಾರೆ; ಸೀಳಿ ಅಭ್ಯಸಿಸುತ್ತಾರೆ. ಮುಂದಿನವರನ್ನು ಹೇಗೆ ಬದುಕಿಸಬಹುದು ಅಂತ ಕಲಿಯುತ್ತಾರೆ. ಅವಳಿಗೇನೂ ಅನಿಸುವುದಿಲ್ಲ, ಅವಳದನ್ನು ಕೊಟ್ಟುಬಿಟ್ಟಿದ್ದಾಳೆ; ಅದು ಅವಳದಲ್ಲ. ಇದಂ ನ ಮಮ. ಅವನಿಗೆ ಅಚ್ಚರಿಯಾದ್ದೆಂದರೆ ಆ ಶಬ್ದವೀಗ ತನ್ನನ್ನು ಇಷ್ಟೂ ಹಿಂಸಿಸುತ್ತಿಲ್ಲ; ಆಳದಲ್ಲಿ ಒತ್ತಿಟ್ಟ ಹಾವು ಓಡಿಹೋಗಿದೆ! ತನಗೂ ಅಂತಹದೆ ಆಸೆ ಹುಟ್ಟುತ್ತಿದೆ! ಅವಳ ಕೊನೆಯಾಸೆ ಈಡೇರಬೇಕು; ಈಡೇರುತ್ತದೆ. ಅವಳ ಶರೀರದ ಮೇಲೆ ಕಣ್ಣು ಹೋಯಿತು. ಎದೆ ಒಂದು ಲಯದಲ್ಲಿ ಏರಿಳಿಯುತ್ತಿತ್ತು.


### ಬನವಾಸಿ ವೆಂಕಟೇಶ ದೀಕ್ಷಿತ್

ಕಲಬುರ್ಗಿಯಲ್ಲಿ ಅಂಚೆ ಇಲಾಖೆಯಲ್ಲಿ ವೃತ್ತಿ ಜೀವನ ಆರಂಭಿಸಿದ ವೆಂಕಟೇಶ ದೀಕ್ಷಿತ್ ಭಾರತೀಯ ಸೇನೆಯಲ್ಲಿ ವಾರಂಟ್ ಆಫೀಸರಾಗಿ ಕಾಶ್ಮೀರದ ಬಾರಾಮುಲ್ಲಾ, ಕುಪ್ವಾಡಾ, ಶ್ರೀನಗರ, ನಗ್ರೋಟ ಮತ್ತು ನವದೆಹಲಿ, ನಾಗಪುರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಬಳಿಕ, ದೂರಸಂಪರ್ಕ ಇಲಾಖೆಯಲ್ಲಿ ಹಿರಿಯ ಅಧಿಕಾರಿಯಾಗಿ ನಿವೃತ್ತರು. ಪ್ರಕಟಿತ ಕಥಾಸಂಕಲನಗಳು: 'ಕಾವಡಿ', ಬೇರಿಗಂಟಿದ ಮಣ್ಣು', 'ಗಡಿಯೀಚೆಯ ಸದ್ದುಗಳು'. ಕಾದಂಬರಿ: 'ನಕ್ಷತ್ರ ನುಂಗುವ ಸಮಯ'. ಪ್ರಸ್ತುತ ಬೆಂಗಳೂರಿನಲ್ಲಿ ವಾಸ.